ಆಫೀಸುಗಳಲ್ಲಿ ಕೆಲಸ ಮಾಡದವರ ಬಗ್ಗೆ ಶರಣಪ್ಪ ಕೇಳಿದ್ದ, ನೋಡಿರಲಿಲ್ಲ. ಅನುಭವಕ್ಕೆ ಬಂದಿರಲಿಲ್ಲ. ಇಂಥವರನ್ನು ಈಗ ಅಗದೀ ಹತ್ತಿರದೊಳಗೆ ಕಂಡ ಅವನಿಗೆ ತುಸು ದಿಗಿಲು. ಕುರ್ಚಿ, ಟೇಬಲ್ಲುಗಳ ಮ್ಯಾಲ ವಿವಿಧ ಭಂಗಿಗಳಲ್ಲಿ ಕೂತು ಹರಟೆ ಹೊಡೀತಾನೋ, ಪೇಪರ್ ಓದತಾನೋ ಇಲ್ಲಾ ಆಫೀಸೊಳಗಿಂದ ಅದೃಶ್ಯರಾಗಿ ಕ್ಯಾಂಟೀನ್‌ದೊಳಗ ಪ್ರತ್ಯಕ್ಷರಾಗತಾನೋ ಅವರ ಹೊತ್ತುಗಳೆಯುವ ಚಾಳಿ ಅವನ ಮನಸ್ಸಿಗೆ ಬಂದಿರಲಿಲ್ಲ. ಆಫೀಸಿನ ವ್ಯವಹಾರವೆಲ್ಲ ಕ್ಯಾಂಟೀನ್‌ದೊಳಗಽ ಇತ್ಯರ್ಥ ಆಗೋದು ಎಂದು ಕೇಳಿದ ಮೇಲಂತೂ ಅವನಿಗೆ ಮತ್ತೂ ವಿಸ್ಮಯ. ಅಲ್ಲಿದ್ದ ಯಾರಿಗೂ ತಾವು ಮಾಡುತ್ತಿರುವುದು ತಪ್ಪು, ಅಪರಾಧ, ದ್ರೋಹ ಅಂತ ಅನ್ನಿಸಿದ ಹಾಂಗಽ ಇಲ್ಲ. ಹಂಗಾಗಿ ಯಾರ ಮಾರೀ ಮ್ಯಾಲೂ ಕಳವಳ ಇಲ್ಲ, ಗಾಬರಿ ಇಲ್ಲ, ಯಾವುದಕ್ಕೂ ಅವಸರ ಇಲ್ಲ. ಶ್ರದ್ಧೆಯಂತೂ ಮೊದಲ ಇಲ್ಲ. ಇವತ್ತಿನ ಕೆಲಸ ಇವತ್ತೇ ಮಾಡಿ ಮುಗಿಸಬೇಕಾದ ತುರ್ತಿಲ್ಲ. ಪಾಪ, ತಂತಮ್ಮ ಹರಕತ್ತಿಗೆ ಬಂದ ಪಬ್ಲಿಕ್ ಮಂದಿ ಸುದ್ಧಾ ಇದೆಲ್ಲ ಗೊತ್ತಿದ್ದವರಂತೆ ಎಲ್ಲಾ ಟೇಬಲ್ಲುಗಳಿಗೂ ಒಂದೊಂದು ನಮಸ್ಕಾರ ಹಾಕಿ, ತಪ್ಪುಕಾಣಿಕೆ ಒಪ್ಪಿಸಿ ಕೆಲಸವಾದ ನಂತರ ಮನದಾಳದ ನಗೆ ಬೀರಿ ಇವರು ಕೆಲಸ ಮಾಡಿಕೊಟ್ಟದ್ದೇ ಮಹದುಪಕಾರ ಎಂಬಂತೆ ಕೈಕುಲುಕಿ ಧನ್ಯರಾದೆವು ಎಂಬಂತೆ ಕೊನೆಗೊಂದು ನಿಟ್ಟುಸಿರು ಬಿಟ್ಟು ಅಲ್ಲಿಂದ ತೊಲಗಿ ಹೋಗುತ್ತಿದ್ದುದೇನೂ ಸುಳ್ಳಲ್ಲ. ಹೀಂಗ ರಾಜಾರೋಷಾಗಿ ರೊಕ್ಕ ಹೊಡೆಯುವ ದಂಧೆ ದಿನಂಪ್ರತಿ ಅವ್ಯಾಹತವಾಗಿ ನಡೀತಿದ್ದುದು ನೋಡಿ ಒಂದೇ ವಾರದಲ್ಲಿ ಶರಣಪ್ಪ ಕಂಗಾಲಾಗಿ ಹೋಗಿದ್ದ. ಈಗ ಇವರಲ್ಲಿ ತಾನೂ ಒಬ್ಬನಾಗಿ ಗುರುತಿಸಿಕೊಳ್ಳುವ ಪರಿಸ್ಥಿತಿ ಒದಗಿ ಬಂದುದಕ್ಕೆ ಅವನ ಸಾತ್ವಿಕ ಮನಸ್ಸು ತೀರ ಖೇದಗೊಳ್ಳದೆ ಇರಲಿಲ್ಲ. 'ಲಂಚದ ರೊಕ್ಕ ಅಮೇಧ್ಯಕ್ಕೆ ಸಮಾನ' ಎಂದು ಸಣ್ಣವನಿದ್ದಾಗ ಸಾಲಿಯೊಳಗ ಕನ್ನಡ ಮಾಸ್ತರು ಹೇಳಿಕೊಟ್ಟ ವಾಕ್ಯಕ್ಕೆ ಅವನು ಪೂರ್ತಿ ನಿಷ್ಠನಾಗಿರಲು ನಿಶ್ಚಯಿಸಿದ್ದ, ಕೆಲಸಕ್ಕೆ ಸೇರುವ ಮೊದಲು.

ಗುಳೇದ, ಇಪ್ಪತ್ತು ವರ್ಷಗಳಿಂದ ಆಫೀಸಿನ ಗಾಳಿಯನ್ನೇ ಉಸಿರಾಡತಾನೇ ಬದುಕಿಕೊಂಡವ ಅಂವ, ಶರಣಪ್ಪನ ಅಳುಕನ್ನು ಒಂದೇ ತಿಂಗಳದೊಳಗ ಗುರುತಿಸಿಬಿಟ್ಟಿದ್ದ. ಈಗಿನಿಂದಲೇ ಶರಣಪ್ಪನನ್ನು ಪರಿಸ್ಥಿತಿಯ ಕೂಸಾಗಿ ರೂಪಿಸದಿದ್ದರೆ ಆಮ್ಯಾಲ ಇಂವ ತಾನೂ ಸುಖವಾಗಿ ಇರಲಾರ ಮತ್ತು ತಮ್ಮೆಲ್ಲರಿಗೆ ಸುದ್ಧಾ ತೊಡಕಾಗಿರ್‍ತಾನ ಎಂದುಕೊಂಡು ಶರಣಪ್ಪನ ಟೇಬಲ್ ತಲುಪಿದ. ಸಾವಕಾಶವಾಗಿ ಹೇಳತೊಡಗಿದ 'ನೋಡಪಾ ತಮ್ಮ, ಇಲ್ಲಿ ಹೀಂಗಽ. ತಿಂದವರೇ ಇಲ್ಲಿ ಬದುಕೋದು. ತಿಂದವರು ಸತ್ತ ಉದಾಹರಣೆ ಇನ್ನೂ ಇಲ್ಲ. ಅಂದಮ್ಯಾಲ ತಿನ್ನಲಿಕ್ಕೆ ಅಂಜಿಕಿ ಯಾಕೆ? ನಾವೆಲ್ಲ ಕೆಲಸಕ್ಕೆ ಸೇರುವ ಮೊದಲು ನಮ್ಮನ್ನು ಹರಿದು ತಿಂದವರು ರಗಽಡ ಮಂದಿ. ಆ ಹರಕನ್ನೆಲ್ಲ ಸೇರಿಸಿ ಹೊಲಿಗಿ ಹಾಕ್ಕೋ ಬೇಕಾದ್ರ ಈಗ ನಾವೂ ತಿನ್ನಲೇಬೇಕು. ತಿನ್ನೋದು ತಪ್ಪಲ್ಲ, ಮತ್ತ ತಿನ್ನಲಿಕ್ಕೆ ಹೆದರಬೇಕಾಗಿಲ್ಲ. ನಾವಷ್ಟೇ ತಿನ್ನೂದಿಲ್ಲ, ಇದರೊಳಗೆ ಒಂದು ಪಾಲು ಮೇಲಿನತನಕ ಹೋಗಿ ಮುಟ್ಟತಾನಽ ಇರ್‍ತದ. ಅಲ್ಲದೆ ಆಫೀಸಿನ ತಪಾಸಣೆಗೆ ಬಂದವರ ಎದುರಿಗೆ ನಾವು ಧಾರಾಳವಾಗಿ ತೆರಕೊಳ್ಳಿಕ್ಕೇ ಬೇಕು. ಇದೆಲ್ಲ ಬರೇ ಪಗಾರದೊಳಗ ಆಗ್ತದ ಅಂತ ಮಾಡೀಯೇನು?'

ಆಮ್ಯಾಲ ಗುಳೇದನಿಗೆ ಗೊತ್ತಾತು, ತನ್ನ ಉಪದೇಶ ಇವನ ತಲೀವಳಗ ಇಳಿದಿಲ್ಲ ಅಂತ.